International Journal of Kannada Research
www.kannadajournal.com

ISSN: 2454–5813
IJSR 2016; 2(2): 12-15
© 2016 IJKS
www.kannadajournal.com
Received: 03-12-2015
Accepted: 05-01-2016

**ನಟರಾಜು ಎಸ್ ಎಂ**
ಸಂಶೋಧನಾ ವಿದ್ಯಾರ್ಥಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ, ಮೈಸೂರು
ವಿಶ್ವವಿದ್ಯಾನಿಲಯ ಮೈಸೂರು.

**Correspondence**
**ನಟರಾಜು ಎಸ್ ಎಂ**
ಸಂಶೋಧನಾ ವಿದ್ಯಾರ್ಥಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ, ಮೈಸೂರು
ವಿಶ್ವವಿದ್ಯಾನಿಲಯ ಮೈಸೂರು.

# ಜನಪದ ಲಾವಣಿಗಳಲ್ಲಿ ಟಿಪ್ಪುಸುಲ್ತಾನ

**ನಟರಾಜು ಎಸ್ ಎಂ**

"ದುಃಖದ, ನಾಚಿಕೆಯ, ಪಾಪಜೀವನವನ್ನು
ದೀರ್ಘಕಾಲ ನಡೆಸುವುದಕ್ಕಿಂತ
ಸಂಗ್ರಾಮ ಮೇಘಗರ್ಜನೆಯಾಗುತಿರಲು
ರಕ್ತವರ್ಷ ಸುರಿಯುತಿರಲು, ವೀರನಂತೆ
ರಣರಂಗದಲ್ಲಿ ಮರಣವನ್ನಪ್ಪುವುದೇ ಮೇಲು"[1]

1823 ರಲ್ಲಿ ಆಂಗ್ಲಕವಿ ಬರ್ನಾಡ್ ವಿಕ್ಲಿಫ್ ಟಿಪ್ಪು ಬಿದ್ದೆಡೆ ಕೂತು ಹಾಡಿದ ಹಾಡಿನ ಪಲ್ಲವಿ ಇದು. ಈ ಮೇಲಿನ ಸಲು ಕವಿಯೊಬ್ಬ ಟಿಪ್ಪುವಿನ ದುರಂತವನ್ನು, ವೀರತ್ವವನ್ನು ಕುರಿತು ಹಾಡಿದ ಅಥವಾ ಕಟ್ಟಿದ ಕವಿತೆಯಾದರೆ ಹೆಸರೇ ಗೊತ್ತಿರದ ಜನಸಾಮಾನ್ಯರು ಟಿಪ್ಪುವನ್ನು ಕುರಿತು ಕಟ್ಟಿದ ಲಾವಣಿಗಳು ನಮಗೆ ಇಂದಿಗೂ ಜೀವಂತವಾಗಿ ದೊರೆಯುತ್ತಿವೆ.
ಯಾವ ವ್ಯಕ್ತಿ ಜನಸಾಮಾನ್ಯರ ನಾಯಕನಾಗುತ್ತಾನೋ ಅವನು ಜನಪದರು ಕಟ್ಟುವ ಕಥೆ, ಹಾಡಿನ ವಸ್ತುವಾಗುತ್ತಾನೆ. ಹಾಗೆಯೇ ಹೈದರಾಲಿ–ಟಿಪ್ಪು ಜನರ ನಡುವೆಯೇ ಇದ್ದು ಅವರ ಕಷ್ಟ ಸುಖಗಳಲ್ಲಿ ಭಾಗಿಯಾಗಿ ಬೆಳೆದ ನಾಯಕರು. ಈ ಇಬ್ಬರಿಗೆ ಸುಲ್ತಾನಗಿರಿ ವಂಶಪಾರಂಪರ್ಯವಾದುದಲ್ಲ ಬದಲಿಗೆ ತಮ್ಮ ಸಮಾಜಮುಖಿ ಕೆಲಸಗಳಿಂದ ಮತ್ತು ಚಾಣಾಕ್ಷತನ, ವೀರತ್ವದಿಂದ ತಾವೇ ದಕ್ಕಿಸಿಕೊಂಡ ಪದವಿ. ತಾವು ಬೆಳೆದ ನಂತರ ಅಥವಾ ತಮ್ಮ ಅಧಿಕಾರ ಪ್ರಾಬಲ್ಯವಾದ ನಂತರ ಸರ್ವಾಧಿಕಾರಿಗಳಾಗಿ ಮತ್ತು ಕ್ರೂರತನದಿಂದ ವರ್ತಿಸಿದ್ದರೆ ಬಹುಶಃ ಜನಪದರ ಲಾವಣಿಗಳಲ್ಲಿ ಇವರು ನಾಯಕರಾಗುತ್ತಿದ್ದರೇ ಎಂಬುದು ಕಾಡಿಸುವಂತಹದ್ದು. ಲಿಖಿತ ಇತಿಹಾಸಕಾರರು ಚಿತ್ರಿಸಿರುವ ಹೈದರ್–ಟಿಪ್ಪು ವಿವಾದದ ಕೇಂದ್ರ ಬಿಂದುಗಳು ಆದರೆ ಸಾಮಾನ್ಯ ಜನರು ಕಟ್ಟಿರುವ ಇತಿಹಾಸದಲ್ಲಿ ಇವರಿಬ್ಬರು ಮಹಾನ್ ನಾಯಕರು.
ನಮ್ಮ ಇತಿಹಾಸವನ್ನು ಹುಟ್ಟುಹಾಕುವುದರಲ್ಲಿ ವಾಕ್ ಪರಂಪರೆಯ ಕೊಡುಗೆ ದೊಡ್ಡದು ಅಂತೆಯೇ ಹೈದರ್–ಟಿಪ್ಪುವಿನ ಇತಿಹಾಸ ಕಟ್ಟುವಲ್ಲಿ ಜನಪದರು ಕಟ್ಟಿರುವ ಲಾವಣಿಗಳು ಪ್ರಮುಖವಾಗಿವೆ. ಹೈದರ್ ಟಿಪ್ಪು ಕುರಿತ ಲಾವಣಿಗಳನ್ನು ಅಂದಿನ ಜನಪದರು ಮೈಸೂರು, ಶ್ರೀರಂಗಪಟ್ಟಣದ ಆಸುಪಾಸಿನಲ್ಲಿ ಜನನಿಬಿಡ ಚೌಕಗಳಲ್ಲಿ ನಿಂತು ಹಾಡುತ್ತಿದ್ದರು. ಹೈದರ್ ಮತ್ತು ಟಿಪ್ಪು ಬಗ್ಗೆ ಅನೇಕ ಲಾವಣಿಗಳು ಹೀಗೆ ಪ್ರಚಲಿತವಿದ್ದವೆಂದು ಇತಿಹಾಸದ ಪುಟಗಳಲ್ಲಿ ಅಲ್ಲಲ್ಲಿ ದೊರೆಯುತ್ತವೆ.

ಕೇಳಿರಿ ಕೇಳಿರಿ ಕಲಿಯುಗ ಕಲಿಗಳೆ
ಅಮರ ಟಿಪ್ಪುವಿನ ಮಧುರ ಕಥೆ
ಶೂರ ಟಿಪ್ಪುವಿನ ಧೀರ ಕಥೆ
ಹೈದರಾಲಿಯ ಹೆಮ್ಮೆ ಪುತ್ರನ ಸತ್ಯ ಕಥೆ ಎಂದು ಪ್ರಾರಂಭವಾಗಿ
"ಬೇಷಕ್ ತಮಾಷಾ ಟೈಗರ್ ನಿಶಾನಾ
ಟೀಪುಸುಲ್ತಾನನ ಹೆಸರಾಯ್ತು
ಮಸಲತ್ ಮಾಡಿದ ಮೀರ್‌ಸಾದಕನಿಗೆ

ದೇಶದ್ರೋಹಿ ಎಂಬ ಹೆಸರಾಯ್ತು"[2] ಎಂದು ಇಡೀ ಟಿಪ್ಪುವಿನ ಇತಿಹಾಸವನ್ನೇ ಲಾವಣಿಗಳ ಮೂಲಕ ವಿವರಿಸಿದ್ದಾರೆ. ಇದುವರೆಗೆ ಸಿಕ್ಕಿರುವ ಲಾವಣಿಗಳಲ್ಲಿ ಹೈದರ್ ಹಿನ್ನಲೆ, ಅವನ ಬೆಳವಣಿಗೆ, ಟಿಪ್ಪುವಿನ ವ್ಯಕ್ತಿತ್ವ ಹಾಗೂ ಶ್ರೀರಂಗಪಟ್ಟಣದ ನಿರ್ಣಾಯಕ ಯುದ್ಧಗಳ ಚಿತ್ರಣ, ಹೀಗೆ ಟಿಪ್ಪು ಇತಿಹಾಸವನ್ನೇ ಕಟ್ಟಿಕೊಟ್ಟಿದ್ದಾರೆ. ಹೈದರ್ ವ್ಯಕ್ತಿತ್ವ ಕುರಿತು ಜನಪದರು ಹೀಗೆ ಹಾಡಿದ್ದಾರೆ.

"ಹೈದರ ಕಾಲದಿ ಮೈಸೂರು ದೇಶ
ಮೊದಲಿಗಿಂತ ಮುಂದೊರೆದಿತ್ತು
ಹೈದರಾಲಿಗೆ ಖಾನ್ ಬಹದ್ದೂರ
ನವಾಬನೆಂಬುವ ಬಿರುದಿತ್ತು."[3]

ಈ ಲಾವಣಿಯ ಸಾಲಿನಲ್ಲಿ ಗಮನಿಸಬೇಕಾದ ಅಂಶವೆಂದರೆ ಹೈದರಾಲಿಯ ಕಾಲದಲ್ಲಿ ಮೈಸೂರು ಪ್ರಾಂತ್ಯ ಮೊದಲಿಗಿಂತ ಅಭಿವೃದ್ಧಿ ಹೊಂದಿತ್ತು ಎಂಬುದು. ಇದರಿಂದ ಹೈದರಾಲಿಯು ತನ್ನ ಕಾರ್ಯಕ್ಷೇತ್ರದ ಅಭಿವೃದ್ಧಿಗೆ ಗಮನಹರಿಸಿ ಕೆಲಸ ಮಾಡುತ್ತಿದ್ದ ಎಂಬದು ನಿಸ್ಸಂದೇಹ ವಿಷಯವಾಗಿದೆ. ತಂದೆಯಂತೆಯೇ ಹೈದರನ ಮಗ ಟಿಪ್ಪು ಪ್ರಗತಿಪರ ಸುಲ್ತಾನವಾಗಿದ್ದ ಅದಕ್ಕೆ ಸಾಕ್ಷಿಯಾಗಿ

"ಅಪ್ಪಕಟ್ಟಿದ ಮೈಸೂರು ದೇಶ
ದೊಡ್ಡದಿತ್ತಲ್ಲಾ
ಟೀಪೂವಿನ ಕಾಲದೊಳು ಇನ್ನು
ವಿಸ್ತರಿಸಿತಲ್ಲಾ"[4]

ಎಂದು ಜನಪದರು ಹಾಡಿ ಹೊಗಳಿರುತ್ತಾರೆ. ಅಷ್ಟೇ ಅಲ್ಲದೆ ಟಿಪ್ಪುವಿನ ವೀರತ್ವ, ಶೌರ್ಯ ಪರಾಕ್ರಮವನ್ನು ಕುರಿತು ಹಾಡುತ್ತಾ

"ಹೈದರನ ಬಳಿಕ ಟೀಪು ಸುಲ್ತಾನ
ಬೆದರಿಸಿದ ಗದಗದ ಹಿಂದೂಸ್ತಾನ
ಪದವಿಯೊ ಮೈಸೂರ್ ಸುಲ್ತಾನ
ಕದನದಿ ಮಂಗ್ಳೂರ್ ಹಿಡಿದಾನು
ಕೈವಶ ಬೆದರಿತು ಲಂಡಾನು
ಆಟಾಟೋಪದಿ ಟೀಪು ಸುಲ್ತಾನನು
ಆರ್ಕಾಟ್ ಲೂಟಿಯ ಮಾಡಿದನು
ಏಟೇಟಿನ ಮೇಲ್ ಉಲ್ಪಾ ಫಿರಂಗಿಯ
ಕೋಠಿಗಳೆಷ್ಟೂ ಲೂಟಿದ್ದನು.
ನಟನೆಯ ನೈಜಾಂ ಮರಾಠಿ ಪೇಶ್ವೆಯ
ಪಟಾಲಮ್ಮ ದಿಟ್ಟ ಗೆದ್ದಿದ್ದನು.

ಎಂದು ಟಿಪ್ಪುವಿನ ದಿಗ್ವಿಜಯ ಒಂದು ದಿಕ್ಕಿನಿಂದ ಹೊರಟು ಮೈಸೂರಿನ ಸುತ್ತಮುತ್ತ ಇದ್ದ ಎಲ್ಲಾ ವೈರಿಗಳಿಗೂ ಬಿಸಿ ಮುಟ್ಟಿಸಿ ದೂರದ ಲಂಡನ್ನಿಗೂ ಬೆದರಿಕೆ ಒಡ್ಡಿತು ಎಂಬುದನ್ನು ಮೇಲಿನ ಲಾವಣಿಯು ಅರ್ಥೈಸುತ್ತದೆ. ಟಿಪ್ಪುವಿನ ಶೌರ್ಯಕ್ಕೆ ನಮ್ಮ ಆಶುಕವಿಗಳು ಕೊಟ್ಟ ಬಿರುದೇ 'ಮೈಸೂರು ಹುಲಿ' ಎಂಬುದು ಅದನ್ನು ಲಾವಣಿಯಲ್ಲಿ ಹೀಗೆ ಕಾಣಬಹುದು.

"ಟಿಪ್ಪು ಸುಲ್ತಾನನು ವೈರಿಯ ಮರ್ದಿಸಿ
ಮೈಸೂರು ಹುಲಿಯೆಂದೆನಿಸಿದ್ದನು"

ಟಿಪ್ಪು ಸುಲ್ತಾನ ಕೇವಲ ವೀರ ಯೋಧನಷ್ಟೇ ಅಲ್ಲ ಬದಲಾಗಿ ಉತ್ತಮ ಆಡಳಿತಗಾರನೂ ಹೌದು. ಅದಕ್ಕೆ ಪೂರಕವೆಂಬಂತೆ ಲಾವಣಿಯೊಂದು ಹೀಗಿದೆ.

"ಟಿಪ್ಪು ರಾಜ್ಯದೊಳು ಶರಾಬು, ಶೇಂದಿ
ಗಾಂಜಾ ಅಫೀಮು ಇರಲಿಲ್ಲ
ಟಿಪ್ಪುವಿನ ಕಾಲದೊಳು ಜೂಜಿನಾಟ
ಮೇಣ್ ವ್ಯಭಿಚಾರದ ಸುಳಿವಿಲ್ಲ

ಟಿಪ್ಪು ತನ್ನ ರಾಜ್ಯದಲ್ಲಿದ್ದ ಈಚಲು ಮರಗಳನ್ನು ಕಡಿಸಿಹಾಕಿದ್ದ ಜೊತೆಗೆ ತನ್ನ ರಾಜ್ಯದಲ್ಲಿ ಜೂಜು, ವ್ಯಭಿಚಾರದಂತಹ ಕೆಟ್ಟ ಪ್ರವೃತ್ತಿಗಳಿಗೆ ಅವಕಾಶ ನೀಡದೆ ರಾಜ್ಯದ ಅಭಿವೃದ್ಧಿಯ ಕೆಲಸದಲ್ಲಿ ನಿಷ್ಪಕ್ಷಪಾತವಾಗಿ ಕೆಲಸ ಕೈಗೊಂಡಿದ್ದನು. ಅಷ್ಟೇ ಅಲ್ಲ ಟಿಪ್ಪು ಹಿಂದೂ ಮುಸಲ್ಮಾನರ ಸೌಹಾರ್ದಯುತ ಕೊಂಡಿಯಾಗಿ ಕಾರ್ಯನಿರ್ವಹಿಸಿದ್ದನು. ಅದಕ್ಕೆ ಸಾಕ್ಷಿಯಾಗಿ ಲಾವಣಿಯೊಂದು ಹೀಗಿದೆ.

"ಜೋಡಿಸುತ್ತಿನ ಕೋಟೆಗೆ ಟೈಗರ್
ಆಗಿ ಕಾದಿದ್ದ
ಬೇಡಿದ ದ್ವಿಜರಿಗೆ ಬಿಡದೆ ದಾನ ನೀಡಿದ್ದ
ಟಿಪ್ಪು ಸುಲ್ತಾನ ಹಿಂದೂ ಮುಸಲ್ಮಾನರ
ಉದ್ಧಾರಿ ದೊರೆಯಾಗಿದ್ದ."[7]

ಟಿಪ್ಪುವವರ ಕುರಿತು ಇಂಗ್ಲೀಷ್ ಇತಿಹಾಸಕಾರರು 'ಟಿಪ್ಪು ಸುಲ್ತಾನ ಅನ್ಯಧರ್ಮ ದ್ವೇಷಿ, ಕ್ರೂರಿ' ಎಂದಿದ್ದಾರೆ. ಆದರೆ ಇದಕ್ಕೆ ತಕ್ಕ ಉತ್ತರವೆಂಬಂತೆ ಮೇಲಿನ ಲಾವಣಿ ಇದೆ. ಇದರಿಂದ ಟಿಪ್ಪು ಒಬ್ಬ ಪರಧರ್ಮ ಸಹಿಷ್ಣು, ಬೇಡಿದ ಜನರಿಗೆ ಅವರ ಜಾತಿ, ಮತ, ಧರ್ಮ ಯಾವುದನ್ನು ಲೆಕ್ಕಿಸದೆ ದಾನ ನೀಡುವ, ಉದಾರಿ ದೊರೆಯಾಗಿದ್ದ ಎಂಬುದು ವೇದ್ಯವಾಗುತ್ತದೆ.

ಟಿಪ್ಪು ಸುಲ್ತಾನ ತನ್ನ ಅಧಿಕಾರಿಗಳ ಬಗ್ಗೆ ಒಳ್ಳೆಯ ನಂಬಿಕೆ ಇಟ್ಟುಕೊಂಡಿದ್ದ ಎಂಬುದನ್ನು ಲಾವಣಿಯೊಂದು ಹೀಗೆ ತಿಳಿಸಿಕೊಡುತ್ತದೆ.

"ಹೆತ್ತಯ್ಯನೆಂದು ಪೂರ್ಣಯ್ಯನೊಳು
ಟೈಗರ್ ನಂಬಿಕೆ ಬಹುಯಿತ್ತು
ಭರವಸೆ ಪೂರ್ಣಯ್ಯನೊಳ್
ದಿವಾನ್‌ಗಿರಿ ಕೊಟ್ಟಿದ್ದ"[8]

ಇಲ್ಲಿ ಹಿಂದೂವಾಗಿದ್ದ ಪೂರ್ಣಯ್ಯ ಮೇಲೆ ಟಿಪ್ಪುವಿಗೆ ಯಾವ ರೀತಿಯ ನಂಬಿಕೆ ಇದ್ದಿತು ಎಂಬುದು ಸ್ಪಷ್ಟವಾಗುತ್ತದೆ. ಜೊತೆಗೆ ಟಿಪ್ಪು ಆಸ್ಥಾನದಲ್ಲಿ ಹಿಂದೂಗಳೂ ಕೂಡ ಉನ್ನತ ಅಧಿಕಾರ ಪಡೆದಿದ್ದರು ಎಂಬುದು ಈ ಲಾವಣಿಯ ಮುಖಾಂತರ ಅರ್ಥವಾಗುತ್ತದೆ. ಟಿಪ್ಪುಸುಲ್ತಾನ ತನ್ನ ಆಸ್ಥಾನದಲ್ಲಿ ಎಲ್ಲಾ ವರ್ಗದ ಜನರಿಗೆ ಅವಕಾಶ ಕೊಟ್ಟಿದ್ದ ಎಂಬುದಕ್ಕೆ ಅವನು ಸೈನಿಕ ವ್ಯವಸ್ಥೆಯನ್ನು ಮಾಡಿಕೊಂಡಿದ್ದ ಪರಿಯೇ ಸಾಕ್ಷಿಯಾಗುತ್ತದೆ. ತನ್ನ ಸೈನ್ಯದಲ್ಲಿ ಜಾತಿ, ಮತ, ಧರ್ಮದ ಹಂಗಿಲ್ಲದೆ ಎಲ್ಲಾ ವರ್ಗದ ಜನರನ್ನು ಸೇರಿಸಿಕೊಂಡಿದ್ದನು. ಅಷ್ಟೇ ಅಲ್ಲ ಎಲ್ಲಾ ವರ್ಗದ ಜನರಿಗೆ ಫಲವತ್ತತೆಗೆ ಅನುಗುಣವಾಗಿ ಕಂದಾಯ ನಿರ್ಧರಿಸಿ ಹಂಚಿದ್ದನು. ಹೀಗೆ ಟಿಪ್ಪು ತನ್ನ ಕಾಲದಲ್ಲಿ ಎಲ್ಲಾವರ್ಗದ ಜನರ ಮೇಲೆ ನಂಬಿಕೆ ಇಟ್ಟು ಪ್ರಗತಿಪರ ಆಡಳಿತದಲ್ಲಿ ತೊಡಗಿದ್ದನು ಎಂಬುದಕ್ಕೆ

"ಶ್ರೀರಂಗಪಟ್ಟಣ ಸುಂದರ ಪುರದ ಸಿರಿ ರಂಗನಾಥನಿಗೆ ತಾ ನಮಿಸಿ
ಯದುಕುಲದರಸರ ಏಳ್ಗೆಯ ಬಯಸಿ ಬಾಗಿದ ಶಿರವ ಒಲವಿರಿಸಿ
ಶೃಂಗೇರಿ ಶಾರದೆ ಚರಣ ಸೇವೆಗೈದನು ಟಿಪ್ಪು ಮನವರಸಿ"

ಎಂಬಂತಹ ಲಾವಣಿಯ ಸಾಲುಗಳಲ್ಲಿ ಟಿಪ್ಪು ಹಿಂದೂ

ದೇವಾಲಯಗಳ ಬಗ್ಗೆ ಇಟ್ಟಿದ್ದ ನಂಬಿಕೆ ಎಂತಹದ್ದು ಎಂದು ವ್ಯಕ್ತವಾಗಿದೆ. ಲಿಖಿತ ಇತಿಹಾಸದಲ್ಲಿ ಹಿಂದೂ ದೇವಾಲಯಗಳನ್ನು ಟಿಪ್ಪು ಕೆಡವಿದ್ದ, ಎಂಬ ದಾಖಲೆಗಳು ಸಿಗುತ್ತವೆ. ಆದರೆ ಜನಪದರೇ ಕಟ್ಟಿರುವ ಲಾವಣಿಗಳು ಅದಕ್ಕೆ ತದ್ವಿರುದ್ಧವಾಗಿವೆ. ತನ್ನ ರಾಜಧಾನಿಯ ವ್ಯಾಪ್ತಿಯಲ್ಲೇ ಇದ್ದ ಶ್ರೀರಂಗಪಟ್ಟಣದ ಶ್ರೀ ರಂಗನಾಥ ಸ್ವಾಮಿ ದೇವನಿಗೆ ತಾನು ಪ್ರತಿನಿತ್ಯ ನಮಸ್ಕಾರಿಸುತ್ತಿದ್ದ ಮಾಹಿತಿ ವ್ಯಕ್ತವಾಗಿದೆ. ಅಷ್ಟೇ ಅಲ್ಲ ಶೃಂಗೇರಿಯ ಶಾರದಾಂಬೆಯ ಮೇಲೆ ಕೂಡ ನಂಬಿಕೆ ಇಟ್ಟಿದ್ದ ಎಂಬುದು ಮೇಲಿನ ಲಾವಣಿಗಳ ಸಾಲುಗಳು ತಿಳಿಸಿಕೊಡುತ್ತವೆ. ಇದಕ್ಕೆ ಪೂರಕವಾಗಿ ಇಂದು ನಮಗೆ ಟಿಪ್ಪು ಶೃಂಗೇರಿಯ ಮಠದ ಸ್ವಾಮಿಗಳಿಗೆ ಅವನು ಬರೆದಿದ್ದ ಪತ್ರಗಳು ಸಿಕ್ಕಿವೆ. ಅವುಗಳಲ್ಲಿ ವ್ಯಕ್ತವಾಗಿರುವಂತೆ ಶ್ರೀಮಠಕ್ಕೆ ತಾನು ಕೊಟ್ಟಿರುವ ಉಡುಗೊರೆಯ ದಾಖಲೆಗಳೂ ಇವೆ.

ಹಾಗೇ ನಂಜನಗೂಡಿನ ನಂಜುಂಡೇಶ್ವರನಲ್ಲಿಯೂ ಟಿಪ್ಪುವಿಗೆ ಅಪಾರ ನಂಬಿಕೆ ಇದ್ದಿತು. ಒಮ್ಮೆ ತನ್ನ ಪಟ್ಟದ ಆನೆಗೆ ಕಣ್ಣಿನ ಬೇನೆ ಕಾಣಿಸಿ ಕೊಂಡಾಗ ಆ ಆನೆಯನ್ನು ನಂಜನಗೂಡಿನ ದೇವಸ್ಥಾನದಲ್ಲೇ ಇರಿಸಿ 48 ದಿನಗಳ ಕಾಲ ವ್ರತ ಮಾಡಿದ ನಂತರ ಆನೆಗೆ ಮತ್ತೆ ಕಣ್ಣು ಬಂದಿದ್ದ ಕಾರಣ ಟಿಪ್ಪು ನಂಜನಗೂಡು ದೇವಸ್ಥಾನದಲ್ಲಿ ಬೆಲೆಬಾಳುವ ಪಚ್ಚೆ ಕಲ್ಲಿನಲ್ಲಿ ಲಿಂಗವೊಂದನ್ನು ಪ್ರತಿಷ್ಠಾಪಿಸ ಅದಕ್ಕೆ 'ಹಕೀಂ ನಂಜುಂಡ' ಎಂದು ನಾಮಕರಣ ಮಾಡಿ ಪ್ರತಿನಿತ್ಯ ತನ್ನ ಹೆಸರಿನಲ್ಲಿ ಪೂಜಾ ಕೈಂಕರ್ಯಗಳು ನಡೆಯುವಂತೆ ನೋಡಿಕೊಂಡದ್ದ ಎಂಬ ಸತ್ಯ ಕಥೆ ನಮಗೆ ಇಂದೂ ಜೀವಂತವಾಗಿ ಕಾಣುತ್ತದೆ.

ಹೀಗೆ ಜನಪದ ಸಾಹಿತ್ಯದಲ್ಲಿ ಟಿಪ್ಪು ಕುರಿತಂತೆ ಆತನ ವೀರತ್ವಕ್ಕೆ, ಆಡಳಿತ ವೈಖರಿಗೆ, ಆತನ ಯುದ್ಧತಂತ್ರಕ್ಕೆ, ಧರ್ಮ ನಂಬಿಕೆ ಸಂಬಂಧಿಸಿದ ದಾಖಲೆಗಳು ಲಾವಣಿಗಳ ಮೂಲಕ, ಕಥೆ, ಐತಿಹ್ಯಗಳ ಮೂಲಕ ದೊರೆಯುತ್ತವೆ. ಆದರೆ ಕೆಲವು ಲಿಖಿತ ದಾಖಲೆಗಳು ಆತ ಒಬ್ಬ ಕ್ರೂರಿ, ಮತಾಂಧ, ಸ್ವಾರ್ಥಿ, ಕರ್ನಾಟಕ ಚರಿತ್ರೆಗೆ ಈತನ ಅಧ್ಯಾಯ ಒಂದು ಕಳಂಕ ಎಂದು ದಾಖಲಿಸುವುದು ಸತ್ಯಕ್ಕೆ ದೂರ ಎಂಬಂತೆ ಟಿಪ್ಪು ಬಗ್ಗೆ ಇರುವ ಜನಪದ ಸಾಹಿತ್ಯ ತಿಳಿಸಿಕೊಡುತ್ತಾ ಜನಪದರ ದೃಷ್ಟಿಯಲ್ಲಿ ಟಿಪ್ಪು ಒಬ್ಬ ವೀರ, ಪರಾಕ್ರಮಿ, ಎಲ್ಲಾ ಮತಗಳನ್ನು ಪ್ರೀತಿಯಿಂದ ಕಾಣುವ ಉದಾರಿ ಎಂದು ಬಿಂಬಿಸಿರುವುದು ಕಂಡುಬರುತ್ತದೆ.

ಈವರೆಗೆ ಚರ್ಚಿಸಿದ ಲಾವಣಿಗನ್ನು ಲಿಂಗದೇವರು ಹಳೇಮನೆ ಅವರ 'ಧೀರ ಟಿಪ್ಪುವಿನ ಲಾವಣಿಗಳು' ಎಂದು ಗ್ರಂಥದಲ್ಲಿ ಸಂಗ್ರಹಿಸಲಾಗಿದೆ. ಟಿಪ್ಪುವಿನ ಲಾವಣಿಗಳನ್ನು 1885ರಲ್ಲಿ ಪ್ರಥಮವಾಗಿ ಫ್ಲೀಟರು ಇಂಡಿಯನ್ ಆಂಟಿಕ್ವೇಲಿಯಲ್ಲಿ ಸಂಗ್ರಹಿಸಿದರು. ನಂತರ ಕೆ.ಅನಂತರಾಮು ಅವರು ತಮ್ಮ 'ಸಕ್ಕರೆ ಸೀಮೆ' ಎಂಬ ಕೃತಿಯಲ್ಲಿ 'ಸುಲ್ತಾನನ ದೌಲತ್ತು ಹೋದದದು' ಎಂಬ ಲಾವಣಿಯನ್ನು ಸಂಗ್ರಹಿಸಿದ್ದರು. ನಂತರ ಜೀ.ಶಂ. ಪ ಅವರು ತಮ್ಮ ಸಂಶೋಧನಾ ಗ್ರಂಥ 'ದಕ್ಷಿಣ ಕರ್ನಾಟಕದ ಜನಪದಕಾವ್ಯ ಪ್ರಕಾರಗಳು ಎಂಬ ಕೃತಿಯಲ್ಲಿ ಟಿಪ್ಪುವಿನ ಕೆಲವು ಲಾವಣಿ ತುಣುಕುಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಆದರೆ ಟಿಪ್ಪುವಿನ ಲಾವಣಿಗಳ ಸಂಗ್ರಹದ ದೃಷ್ಟಿಯಿಂದ ಲಿಂಗದೇವರು ಹಳೇಮನೆ ಅವರ 'ಧೀರ ಟಿಪ್ಪುವಿನ ಲಾವಣಿಗಳು' ಎಂಬ ಕೃತಿ ಪ್ರಮುಖವಾದದ್ದು. ಈ ಗ್ರಂಥದಲ್ಲಿ

ಮೈಸೂರು ಹುಲಿ ಟಿಪ್ಪು ಸುಲ್ತಾನನ ಲಾವಣಿ
ಟಿಪ್ಪು ಸುಲ್ತಾನ್ ಲಾವಣಿ
ಟಿಪ್ಪು ಸುಲ್ತಾನ್ ಬೀಳಿನ ಹಾಡು
ಟಿಪ್ಪು ಸುಲ್ತಾನ
ಏನು ಮೋಸವಾಯಿತು?
ಏನುಮೋಸವಾಯಿತೋ?

ಎಂಬ ಲಾವಣಿಗಳಿದ್ದು ಟಿಪ್ಪುಸುಲ್ತಾನನನ್ನು ಮೌಖಿಕ ಪರಂಪರೆಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವಾಗ ಮಹತ್ವಪೂರ್ಣವಾದ ಆಧಾರಗಳನ್ನು ಒದಗಿಸುತ್ತವೆ. ಆದರೆ ಈ ಲೇಖನದಲ್ಲಿ ಮುಂದೆ ಪ್ರಸ್ತಾಪಿಸಿರುವ ಎರಡು ಲಾವಣಿಗಳು ಅಪ್ರಕಟಿತ ಲಾವಣಿಗಳಾಗಿದ್ದು ಇವು ಮೈಸೂರಿನ ಅಶೋಕಪುರಂ ಬಡವಣೆಯ ಜನರಲ್ಲಿ ಮೌಖಿಕ ರೂಪದಲ್ಲಿ ಚಾಲ್ತಿಯಲ್ಲಿದ್ದು ಅವನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ. ಆ ಲಾವಣಿಗಳು ಇಂತಿವೆ.

**ಸಾದಿಕನ ಸಂಚು**

ಕೇಳಿರಿ ಕೇಳಿರಿ ಕಲಿಯುಗ ಕಲಿಗಳೆ
ಹೇಳುವೆ ನಾನೊಂದು ಅಮರ ಕಥೆ
ಹೈದರಾಲಿಯ ಹೆಮ್ಮೆಯ ಪುತ್ರ
ಟಿಪ್ಪುಸುಲ್ತಾನನು ಮಡಿದ ಕಥೆ॥

ನರಿಬುದ್ಧಿಯ ಪರಂಗಿಮಂದಿ
ಹೂಡಿದರೊಂದು ಮಸಲತ್ತು
ಶ್ರೀರಂಗಪಟ್ಟವ ಲೂಟಿಯನೊಡೆಯಲು
ಜನರಲ್ ಹ್ಯಾರಿಸ್ ಕರೆತಂದು॥

ಮೀರ್ ಸಾದಿಕನ ಸ್ನೇಹವ ಬೆಳೆಸಿ
ಮೋಸವ ಮಾಡಲು ಹೊರಟ್ಯಾರು
ಪರಂಗಿಯವರ ಮೋಸವನರಿಯದೆ
ನಯವಂಚಕರಿಗೆ ವಶವಾದ॥

ಉಪ್ಪಿನ ಋಣಕೆ ಎರಡು ಬಗೆಯಲು
ಮೀರ್ ಸಾದಿಕನು ಮುಂದಾದ
ಅನ್ನ ಕೊಟ್ಟ ದಣಿ ಮಣ್ಣ ಮಾಡಲು
ಮೀರ್ ಸಾದಿಕನು ಮುಂದಾದ ॥

ಕೋಟೆಯ ನೇರಿ ಕೈಬೀಸಿ ಕರೆದ್ಯಾನು
ಖಾಕಿಟೋಪಿಯ ಮಂದಿಯನು
ಮೋಸದಿ ಕೊಲ್ಲುಲು ದಾರಿಯ ತೋರಿ
ಪರಾರಿಯಾದನು ಸಾದಿಕನು॥

ಕೋಟೆಯ ನುಸಿಳಿದ ಪರಂಗಿ ಮಂದಿ
ಕಂಡ ಕಂಡ ಕಡೆ ನುಗ್ಗಿದರು
ಗುಂಡು ಫಿರಂಗಿಯ ದಾಳಿಯ ಮಾಡುತ
ಶ್ರೀರಂಗಪಟ್ಟವ ಸುಟ್ಟಾರು॥

ಪರಂಗಿ ಮಂದಿಯ ಹಾವಳಿ ಕಂಡು
ಕೋಪದಿ ಬಂದನು ಸುಲ್ತಾನ
ಬೆಂಕಿಯ ಕಾರುತ ಪರಂಗಿ
ರುಂಡವ ಚಂಡಾಡಿದನು॥

ಬಲು ಜೋರಾಯಿತು ಕಾಳಗವಂದು
ಮಟ ಮಟ ಮಧ್ಯಾಹ್ನದ ಗಳಿಗ್ಯಾಗ
ಸುತ್ತ ನೋಡಿದರೆ ಮುತ್ತಿದೆ ದಂಡು
ಬಿದ್ದಿತು ಹುಲಿಯು ಬಲೆಯಾಗ॥

ಮೋಸದಿ ಕೊಂದರು ಪರಂಗಿ ಮಂದಿ
ಹುಲಿಯ ಸೀಳಿದ ದೊರೆಯನ್ನ
ಖಾಕಿ ಟೋಪಿಯ ಗುಂಡೇಟಿಗೆ ಬಿದ್ದನು.
ಟಿಪ್ಪುಸುಲ್ತಾನನು ಮಣ್ಣಾಗ॥

**ಟಿಪ್ಪುಸುಲ್ತಾನ್ ಲಾವಣಿ**

ಕನ್ನಡ ನಾಡಿನ ಜನಗಳೆ ಕೇಳಿ ಮೈಸೂರ್ ಹುಲಿಯ ಕಥೆಯನ್ನ
ಟೈಗರ್ ಸೀಳಿ ರಾಜ್ಯವನ್ನಾಳಿದ ಟಿಪ್ಪುಸುಲ್ತಾನನ ಕಥೆಯನ್ನ

ಹೈದರನ ಬಳಿಕ ಟಿಪ್ಪುಸುಲ್ತಾನ
ಆದನು ಮೈಸೂರ್ ಸುಲ್ತಾನ
ಕದನದಿ ಮಂಗಳೂರ್ ಹಿಡದಾನ
ಹೆದರಿತು ಅಂದು ಫಿರಂಗಿ ಮಂದಿ ಕಂಡು ಟಿಪ್ಪು ಧೈರ್ಯನಾ

ಟಿಪ್ಪುವಿನ ರಾಜ್ಯದಿ ಶೇಂದಿ ಶರಾಬು
ಗಾಂಜಾ ಅಫೀಮು ಇರಲಿಲ್ಲಾ
ಟಿಪ್ಪುವಿನ ಕಾಲದೊಳ್ ಜೂಜಿನಾಟ
ಮೇಣ್ ವ್ಯಭಿಚಾರದ ಸುಳಿವಿಲ್ಲ॥

ಕನ್ನಡ ನಾಡಿನ ಜನಗಳೆ ಕೇಳಿ ಮೈಸೂರು ಹುಲಿಯ ಕಥೆಯನ್ನ
ಟೈಗರ್ ಸೀಳಿ ರಾಜ್ಯವನ್ನಾಳಿದ ಟಿಪ್ಪು ಸುಲ್ತಾನನ ಕಥೆಯನ್ನ

ಆಟಾಟೋಪದಿ ಟಿಪ್ಪು ಸುಲ್ತಾನನು
ಅರ್ಕಾಟ್ ಲೂಟಿ ಮಾಡಿದನು
ಏಟೇಟಿನ ಮೇಲ್ ಉಲ್ಟಾ ಪರಂಗಿಯ
ಕೋಠಿಗಳನ್ನು ಲೂಡಿದನು.

ನರಿಬುದ್ಧಿಯ ಪರಂಗಿ ಮಂದಿ
ಮಾಡಿದರೊಂದು ಮಸಲತ್ತು
ಲೂಟಿಯನೊಡೆಯಲು ಶ್ರೀರಂಗಪಟ್ಣಕೆ
ಜನರಲ್ ಹ್ಯಾರಿಸ್ ಕರೆತಂದು

ಕನ್ನಡ ನಾಡಿನ ಜನಗಳೆ ಕೇಳಿ ಮೈಸೂರ್ ಹುಲಿಯ ಕಥೆಯನ್ನ
ಟೈಗರ್ ಸೀಳಿ ರಾಜ್ಯವನ್ನಾಳಿದ ಟಿಪ್ಪುಸುಲ್ತಾನ ಕಥೆಯನ್ನ

ಖಾಸಾ ದಂಡಿನ ಶ್ರೇಷ್ಠ ಮುಖಂಡರ
ಮೋಸವು ಸುಲ್ತಾನನಿಗೆ ಅರಿವಾಯ್ತು
ಮಸಲತ್ ಮಾಡಿದ ವೀರ್ ಸಾಧಿಕನಿಗೆ
ದೇಶದ್ರೋಹಿ ಎಂದು ಹೆಸರಾಯ್ತು॥

ಹರಾಮ್ ಕೋರರ ಕರಾಮತ್ ಅರಿತನು
ಟಿಪ್ಪುಸುಲ್ತಾನನು ನಿಮಿಷದಲ್ಲಿ
ಅರೆ ಹಮಾರೆ ನಮಕ್ ಹರಾಮ್
ಕರೇ ಸೋ ತಾನಂದ ಮನಸಿನಲಿ

ಕನ್ನಡ ನಾಡಿನ ಜನಗಳೇ ಕೇಳಿರಿ ಮೈಸೂರ್ ಹುಲಿಯ ಕಥೆಯನ್ನ
ಟೈಗರ್ ಸೀಳಿ ರಾಜ್ಯವನ್ನಾಳಿದ ಟಿಪ್ಪುಸುಲ್ತಾನನ ಕಥೆಯನ್ನ

ಸ್ವರಾಜ್ಯಕ್ಕೋಸ್ಕರ ಟಿಪ್ಪುಸುಲ್ತಾನನು
ಹೋರಾಡಿ ಮಡಿದನು ಶ್ರೀರಂಗ್ ಪಟ್ಣದಲಿ

ಪರಂಗಿ ಫೌಜಿನ ತುರಂಗ ನುಗ್ಗಿತು
ಶ್ರೀರಂಗ ಧಾಮನ ಪಟ್ಣದಲಿ

ಹಿಂದೂ ಮುಸಲ್ಮಾನರು ಒಂದಾಗಿ ಅತ್ತರು
ದುಃಖದಿಂದ ಊರೊಳಗೆ
ದೊರೆ ಹೋದ ಮೇಲೆ ಇರಬಾರದೆಂದು
ಹಲವರು ಬಿದ್ದರು ನೀರೊಳಗೆ

ಕನ್ನಡ ನಾಡಿನ ಜನಗಳೇ ಕೇಳಿರಿ, ಮೈಸೂರು ಹುಲಿಯ ಕಥೆಗಳನ್ನ
ಟೈಗರ್ ಸೀಳಿ ರಾಜ್ಯವನ್ನಾಳಿದ ಟಿಪ್ಪುಸುಲ್ತಾನನ ಕಥೆಯನ್ನ

ಟಿಪ್ಪು ಸುಲ್ತಾನನ ಕಥೆಯನ್ನು
ಟಿಪ್ಪು ಸುಲ್ತಾನನ ಕಥೆಯನ್ನು.

(ಈ ಲಾವಣಿಗಳನ್ನು ಹಾಡಿದ ವಕ್ತೃ : ಲಾವಣಿ ಮಲ್ಲಯ್ಯ)

**ಕೊನೆ ಟಿಪ್ಪಣಿಗಳು**

| | |
|---|---|
| 1. ಅಪ್ರತಿಮ ದೇಶಭಕ್ತ ಟಿಪ್ಪುಸುಲ್ತಾನ | :ಕೋ. ಚನ್ನಬಸಪ್ಪ: ಪುಟ –20 |
| 2. ಧೀರ ಟಿಪ್ಪುವಿನ ಲಾವಣಿಗಳು | : ಲಿಂಗದೇವರು ಹಳೆಮನೆ: ಪುಟ–29 |
| 3. ಅದೇ ಪುಟ –30 | |
| 4. ಅದೇ ಪುಟ –32 | |
| 5. ಅದೇ ಪುಟ –33 | |
| 6. ಅದೇ ಪುಟ –35 | |
| 7. ಅದೇ ಪುಟ –45 | |
| 8. ಅದೇ ಪುಟ –43 | |

**ಪರಾಮರ್ಶನ ಗ್ರಂಥಗಳು**


| | | |
|---|---|---|
| 1) ದಕ್ಷಿಣ ಕರ್ನಾಟಕದ ಜಾನಪದ ಕಾವ್ಯ ಪ್ರಕಾರಗಳು | – | ಡಾ. ಜಿ.ಶಂ. ಪರಾಮಶಿವಯ್ಯ |
| 2) ಸಕ್ಕರೆ ಸೀಮೆ | – | ಕೆ. ಅನಂತರಾಮು |
| 3) ಫ್ಲೀಟರು ಸಂಗ್ರಹಿಸಿದ ಲಾವಣಿಗಳು | – | ಕ್ಯಾತನಹಳ್ಳಿ ರಾಮಣ್ಣ |
| 4) ಧೀರ ಟಿಪ್ಪುವಿನ ಲಾವಣಿಗಳು | – | ಲಿಂಗದೇವರು ಹಳೇಮನೆ |
| 5) ಜಾನಪದ ಸ್ವರೂಪ | – | ಡಾ. ಹಾ.ಮಾ. ನಾಯಕ್ |